# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1066. |
| ಸದಸ್ಯರು ಹೆಸರು | : | ಶ್ರೀ. ಐವನ್ ಡಿ'ಸೋಜಾ (ವಿಧಾನ ಸಭೆಯಿಂ<br>ಚುನಾಯಿತರಾದವರು). |
| ಉತ್ತರಿಸಬೇಕಾದ ದಿನಾಂಕ | : | 12.03.2026. |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;(ವಿವರ ನೀಡುವುದು) | • ಮಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಸಲುವಾಗಿ ದೀರ್ಘಾವಧಿ ಯೋಜನೆಗೆ ನಗರದ ಕೆಲವು ಪ್ರಮುಖ ರಸ್ತೆಗಳಾದ ಕ್ಲಾಕ್‌ಟವರ್‌ನಿಂದ ಕರಾವಳಿ ಜಂಕ್ಷನ್ ವರೆಗೆ, ಪಿವಿಎಸ್ ಜಂಕ್ಷನ್‌ನಿಂದ ಎಂ.ಜಿ ರಸ್ತೆ ಮುಖಾಂತರ ಲೇಡಿಹಿಲ್ ವರೆಗೆ ಫ್ಲೈಓವರ್ ನಿರ್ಮಿಸಲು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ**(ಅನುಬಂಧ-1ರಲ್ಲಿರಿಸಿದೆ).**<br>• ಅಲ್ಲದೇ ರಾಷ್ಟ್ರೀಯ ಹೆದ್ದಾರಿಯ ಪ್ರಮುಖ ಜಂಕ್ಷನ್‌ಗಳಾದ ಕೆ.ಪಿ.ಟಿ, ನಂತೂರು, ಹ್ಯಾಮಿಲ್ಟನ್, ಅಂಬೇಡ್ಕರ್ ಜಂಕ್ಷನ್, ಕಂಕನಾಡಿ ಜಂಕ್ಷನ್ ಮುಂತಾದ ಕಡೆಗಳಲ್ಲಿ ರಸ್ತೆ ಅಗಲೀಕರಣ, ಜಂಕ್ಷನ್ ಅಭಿವೃದ್ಧಿ ಮತ್ತು ರಸ್ತೆ ದುರಸ್ತಿ ಬಗ್ಗೆ ಸಂಬಂಧಿಸಿದ ಪ್ರಾಧಿಕಾರಿಗಳಾದ ಎಂಸಿಸಿ(Mangalore City Corporation), ಸ್ಮಾರ್ಟ್ ಸಿಟಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ**(ಅನುಬಂಧ-2ರಲ್ಲಿರಿಸಿದೆ)** ನಕ್ಷೆಯೊಂದಿಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿ ಪತ್ರ ವ್ಯವಹಾರ ನಡೆಸಲಾಗಿರುತ್ತದೆ.<br>• ಮಂಗಳೂರು ನಗರದಲ್ಲಿ ಶಾಲಾ ಕಾಲೇಜುಗಳು ಪ್ರಾರಂಭವಾಗುವ ಹಾಗೂ ಬಿಡುವ ವೇಳೆಯಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಸಲುವಾಗಿ ಪ್ರಮುಖ ಜಂಕ್ಷನ್‌ಗಳಲ್ಲಿ ಕರ್ತವ್ಯಕ್ಕೆ ಪೊಲೀಸ್ ಸಿಬ್ಬಂದಿಗಳನ್ನು ನೇಮಿಸಲಾಗಿದೆ. ಹಾಗೂ ಸಂಚಾರ ದಟ್ಟಣೆಯ ಸಂದರ್ಭಗಳಲ್ಲಿ ಸಂಚಾರ ನಿಯಂತ್ರಣಕ್ಕಾಗಿ ಹೆಚ್ಚಿನ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನೇಮಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.<br>• ಪ್ರಮುಖ ರಸ್ತೆಗಳಲ್ಲಿ ಸಂಚಾರಕ್ಕೆ ಅಡ್ಡಿಪಡಿಸುವುದನ್ನು ತಡೆಗಟ್ಟಲು ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಅಲ್ಲದೇ ರಸ್ತೆ ಬದಿಯಲ್ಲಿ Wrong Parking ಮಾಡಿರುವ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಚಾಲಕ ವಿರುದ್ಧ ಎಷ್ಟು ಪ್ರಕರಣ ದಾಖಲಾಗಿದೆ; ಯಾವ ಯಾವ ಪ್ರಕರಣಕ್ಕೆ ಒಳಗಾಗಿರುತ್ತಾರೆ; (ವಿವರ ನೀಡುವುದು); | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಚಾಲಕರುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ ವಿವರಗಳನ್ನು **ಅನುಬಂಧ-3ರಲ್ಲಿರಿಸಿದೆ.** |
| (ಇ) | ಸುಗಮ ಸಂಚಾರಕ್ಕೆ ಮಂಗಳೂರು ನಗರ ಪೊಲೀಸರ ಮುಂದಿರುವ ಯೋಜನೆಗಳಾವುವು; ರಸ್ತೆ ಅಪಘಾತ ತಡೆಗಟ್ಟುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮವೇನು ?(ವಿವರ ನೀಡುವುದು) | **ಸುಗಮ ಸಂಚಾರಕ್ಕೆ ಮಂಗಳೂರು ನಗರ ಪೊಲೀಸರ ಮುಂದಿರುವ ಯೋಜನೆಗಳು:**<br>• ಮಂಗಳೂರು ನಗರದಲ್ಲಿ ಸಂಚಾರ ಸುರಕ್ಷತೆಯ ಕಾಮಗಾರಿಯಡಿಯಲ್ಲಿ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಕಾಮಗಾರಿ ಕೈಗೊಳ್ಳಲು ವರದಿಯನ್ನು ಸಲ್ಲಿಸಲಾಗಿದೆ**(ಅನುಬಂಧ- 4,5 ಮತ್ತು 6ರಲ್ಲಿರಿಸಿದೆ).**<br>• ಸರ್ಕಾರದ ಅನುದಾನದಡಿಯಲ್ಲಿ ನಗರದ ವಿವಿಧ ಸ್ಥಳಗಳಲ್ಲಿ ಸಿಸಿ ಟಿವಿ ಕ್ಯಾಮಾರಗಳನ್ನು ಹಾಗೂ Digital Printed Sign Boardಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.<br><br>**ರಸ್ತೆ ಅಪಘಾತ ತಡೆಗಟ್ಟುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳು :**<br>ಮಂಗಳೂರು ನಗರದಲ್ಲಿ ಅಪಘಾತ ತಡೆಗಟ್ಟುವ ಸಲುವಾಗಿ ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುವ ವಾಹನ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆಗಳನ್ನು ನಡೆಸಿ ಪ್ರಕರಣಗಳನ್ನು ದಾಖಲಿಸುವುದು ಮಾತ್ರವಲ್ಲದೇ ಹಲವಾರು ಜಾಗೃತಿ ಅರಿವು ಕಾರ್ಯಕ್ರಮಗಳನ್ನು ಹಾಗೂ ಇನ್ನಿತರೆ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದು, ಅವುಗಳು ಈ ಕೆಳಕಂಡಂತ್ತಿದೆ.<br>• **ಜಾಗೃತಿ ಅರಿವು ಕಾರ್ಯಕ್ರಮ:** ನಗರದಲ್ಲಿರುವ ಹಲವಾರು ವಿದ್ಯಾ ಸಂಸ್ಥೆ, ಸಂಘ ಸಂಸ್ಥೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಂಚಾರ ಸುರಕ್ಷತೆಯ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿದೆ. ದಿನಾಂಕ: 01-01-2026 ರಿಂದ 31-01-2026 ರ ವರೆಗೆ "Sadak Suraksha-Jeevan Raksha" ಎಂಬ ಧ್ಯೇಯದೊಂದಿಗೆ ರಾಜ್ಯಾದ್ಯಂತ ರಸ್ತೆ ಸುರಕ್ಷತಾ ಮಾಸವನ್ನು ಆಚರಿಸಿ ಜಾಗೃತಿ ಅರಿವು ಕಾರ್ಯಕ್ರಮಗಳನ್ನು ನಡೆಸಲಾಗಿದೆ.<br>• **ರಸ್ತೆ ಗುಂಡಿಗಳನ್ನು ಮುಚ್ಚಿಸಲು ಕ್ರಮ:** ಮಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯಲ್ಲಿರುವ ರಾಷ್ಟ್ರೀಯ ಹೆದ್ದಾರಿ, ಹಾಗೂ ಮಂಗಳೂರು ನಗರ ಪಾಲಿಕೆಯ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರ ನಡೆಸಿ ಕ್ರಮ ಕೈಗೊಳ್ಳಲಾಗಿರುತ್ತದೆ.<br>• **ರಸ್ತೆ ವಿಭಜಕಕ್ಕೆ ರೈಲಿಂಗ್ ಅಳವಡಿಕೆ:** ಪಾದಾಚಾರಿಗಳು ಎಲ್ಲಂದರಲ್ಲಿ ರಸ್ತೆ ದಾಟದಂತೆ, ಸುರಕ್ಷತಾ ದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ-73 ರಲ್ಲಿ ಫಸ್ಟ್ ನ್ಯೂರೋ ಆಸ್ಪತ್ರೆ ಸಮೀಪ ಸಿಎಸ್‌ಆರ್ ಅನುದಾನದಡಿಯಲ್ಲಿ ಸುಮಾರು 500 ಮೀಟರ್ ಮತ್ತು ನಗರದ ಹೃದಯ ಭಾಗವಾದ ಲೇಡಿಹಿಲ್ |

| | | |
|---|---|---|
| | | ಜಂಕ್ಷನ್‌ನಿಂದ ಕೊಟ್ಟಾರ ಚೌಕಿ ಜಂಕ್ಷನ್‌ಗೆ ತೆರಳುವ ರಸ್ತೆಯಲ್ಲಿ ಸುಮಾರು 500 ಮೀಟರ್ ಉದ್ದದ ರೈಲಿಂಗ್‌ಅನ್ನು ಹಾಗೂ ಕೂಳೂರು ನದಿ ಸೇತುವೆ ಮೇಲೆ ಮತ್ತು ಕೋಡಿಕಲ್ ಕ್ರಾಸ್ ಹತ್ತಿರ ತೆರೆದ ರಾಜ ಕಾಲುವೆಗೆ ವಾಹನಗಳು ರಸ್ತೆ ಜಾರಿ ಬೀಳದಂತೆ ರೈಲಿಂಗ್‌ಅನ್ನು ಅಳವಡಿಸಲಾಗಿದೆ.<br>• **ರಾಷ್ಟ್ರೀಯ ಹೆದ್ದಾರಿಯ ರಸ್ತೆಗಳಲ್ಲಿ ವಿಭಾಜಕಕ್ಕೆ ರೈಲಿಂಗ್ ಅಳವಡಿಕೆ:** ರಸ್ತೆ ಅಪಘಾತಗಳಲ್ಲಿ ಪಾದಚಾರಿಗಳ ಹೆಚ್ಚಿನ ಸಾವು ನೋವು ಸಂಭವಿಸಿರುವುದರಿಂದ, ಸುರಕ್ಷತೆಯ ದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ತಲಪಾಡಿಯಿಂದ ಹೆಜಮಾಡಿವರೆಗೆ ಹಾಗೂ ರಾಷ್ಟ್ರೀಯ ಹೆದ್ದಾರಿ 73 ರಲ್ಲಿ ಪಡೀಲ್ ನಿಂದ ಅರ್ಕುಳವರೆಗೆ ರಸ್ತೆಯ ಮೀಡಿಯನ್‌ನಲ್ಲಿ ಪಾದಚಾರಿಗಳು ಎಲ್ಲೆಂದರಲ್ಲಿ ರಸ್ತೆ ದಾಟದಂತೆ ರೈಲಿಂಗ್‌ಗಳನ್ನು ಅಳವಡಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br>• **ಬ್ಲಿಂಕರ್ಸ್ ಹಾಗೂ ಹಂಪ್ಸ್ ಗಳ ಅಳವಡಿಕೆ:** ಸಂಚಾರ ಸುರಕ್ಷತಾ ಕ್ರಮವಾಗಿ ಸಂಬಂಧಪಟ್ಟ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಮಂಗಳೂರು ನಗರದ ಕಿನ್ನಿಗೋಳಿ ಹಾಗೂ ಕುಂಟಿಕಾನದಲ್ಲಿ ರಸ್ತೆಯುದ್ದಕ್ಕೂ ಬ್ಲಿಂಕರ್ಸ್‌ಗಳನ್ನು ಹಾಗೂ ಹಂಪ್ಸ್‌ಗಳನ್ನು ಅಳವಡಿಸಲಾಗಿದೆ.<br>• **ಸೂಚನಾ ಫಲಕಗಳ ಅಳವಡಿಕೆ:** ಮಂಗಳೂರು ನಗರದ ಸಂಚಾರ ಪೂರ್ವ, ಸಂಚಾರ ಪಶ್ಚಿಮ ಹಾಗೂ ಸಂಚಾರ ಉತ್ತರ, ಸಂಚಾರ ದಕ್ಷಿಣ, ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಈಗಾಗಲೇ ಸುಮಾರು 80 Digital Printed Sign Board ಗಳನ್ನು ಅಳವಡಿಸಿ, ರಸ್ತೆ ಅಪಘಾತಗಳ ಪ್ರಮಾಣ ಕಡಿಮೆ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ.<br>• **ಸಾಮಾಜಿಕ ಜಾಲತಾಣ :** ಮಂಗಳೂರು ನಗರದಲ್ಲಿ ಸಾರ್ವಜನಿಕರಿಗೆ ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಪ್ರತಿನಿತ್ಯದ ಸಂಚಾರ ವ್ಯವಸ್ಥೆಯ ಬಗ್ಗೆ ಹಾಗೂ ಅಪಘಾತಗಳ ಬಗ್ಗೆ ಅರಿವು ಮೂಡಿಸಲು ಸಾಮಾಜಿಕ ಜಾಲತಾಣಗಳ ಮೂಲಕ ಸಾರ್ವಜನಿರಿಗೆ ಮನದಟ್ಟಾಗುವ ರೀತಿಯಲ್ಲಿ ಪ್ರಚಾರ ಪಡಿಸಿ ಜಾಗೃತಿ ಮೂಡಿಸಲಾಗುತ್ತಿದೆ. |

ಹೆಚ್‌ಡಿ 133 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.

ಅನುಬಂಧ-1

ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ನಂಬ್ರ: ಸಿ.ಆರ್.ಎಂ-3/ ೦೨ /ಸಿಓಪಿ/ಮಂ.ನ/2026

ಪೊಲೀಸ್ ಆಯುಕ್ತರ ಕಚೇರಿ
ಮಂಗಳೂರು ನಗರ, ಮಂಗಳೂರು
ದಿನಾಂಕ: ೦೨-02-2026

ಇವರಿಗೆ

ಜಿಲ್ಲಾಧಿಕಾರಿಗಳು
ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು.

ಮಾನ್ಯರೇ,

ವಿಷಯ : ನಗರದ ಒಳ ಭಾಗದಲ್ಲಿ ವಾಹನ ಸುಗಮ ಸಂಚಾರದ ಅಭಿವೃದ್ಧಿಗಾಗಿ ಕೈಗೊಳ್ಳಬಹುದಾದ ದೂರದೃಷ್ಟಿ ಯೋಜನೆಗಳ ಕುರಿತು ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ : ಡಿಸಿಪಿ(ಅ ಮ್ತು ಸಂ) ರವರ ಪತ್ರ ಸಂಖ್ಯೆ:26/ಡಿಸಿಪಿ(ಅ ಮತ್ತು ಸಂ)/ಸಿಓಪಿ/ಮಂ.ನ/2026 ದಿನಾಂಕ 31-01-2026

************

ಮಂಗಳೂರು ಭೂ ಸಾರಿಗೆಯ ಜೊತೆಗೆ ಜಲ ಸಾರಿಗೆ, ವಾಯು ಸಾರಿಗೆ ಮತ್ತು ರೈಲ್ವೆ ಮಾರ್ಗಗಳನ್ನು ಹೊಂದಿರುವ ನಗರವಾಗಿದೆ. ಇದರಿಂದ ವಿವಿಧ ಸರಕು ವಾಹನಗಳು, ಅಧಿಕ ಸಂಖ್ಯೆಯ ಪ್ರವಾಸಿಕರ ವಾಹನಗಳು ನಗರವನ್ನು ಪ್ರವೇಸಿಸುತ್ತಿದೆ. ಮಂಗಳೂರು ನಗರವು ದಿನೇದಿನೇ ಅಭಿವೃದ್ಧಿಗೊಳ್ಳುತ್ತಿರುವ ನಗರವಾಗಿದ್ದು, ಹೆಚ್ಚು ವಾಹನಗಳ ನೊಂದಣಿಯಾಗುವುದರೊಂದಿಗೆ ನಗರದಲ್ಲಿ ವಿವಿಧ ವಿದ್ಯಾ ಕೇಂದ್ರಗಳು, ವಿವಿಧ ಬೃಹತ್ ಕೈಗಾರಿಕಾ ಸಂಸ್ಥೆಗಳು ಇರುವುದರಿಂದ ಹೊರ ಜಿಲ್ಲೆಯ ಮತ್ತು ಹೊರ ರಾಜ್ಯದ ವಿದ್ಯಾರ್ಥಿಗಳು, ಉದ್ಯೋಗಿಗಳು ನಗರಕ್ಕೆ ಆಗಮಿಸಿ ನೆಲೆಸುತ್ತಿರುವುದರಿಂದ ವಾಹನಗಳ ಸಂಖ್ಯೆಯ ಹೆಚ್ಚಾಗಿರುವುದಾಗಿದೆ.

ಮಂಗಳೂರು ನಗರದ ಒಳಭಾಗದಲ್ಲಿ ವಿವಿಧ ಸರ್ಕಾರಿ ಇಲಾಖೆಯ ಕಟ್ಟಡಗಳು, ಕೇಂದ್ರ ಮಾರುಕಟ್ಟೆ, ಮೀನಿನ ಮಾರ್ಕೆಟ್, ನಗರದ ಪ್ರತಿಷ್ಠಿತ ಮಾಲ್‌ಗಳು, ವಾಣಿಜ್ಯ ಸಂಕೀರ್ಣಗಳು, ವ್ಯಾಪಾರ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳಿದ್ದು, ಈ ಪ್ರದೇಶವು ಗರಿಷ್ಠವಾಗಿ ಎಲ್ಲಾ ಸೌಲಭ್ಯವನ್ನು ಹೊಂದಿರುವ ನಗರದ ಕೇಂದ್ರಿಕೃತ ಪ್ರದೇಶವಾಗಿರುವುದರಿಂದ ಜಿಲ್ಲೆಯ ವಿವಿಧ ಭಾಗಗಳಿಂದ ಹಾಗೂ ಹೊರ ಜಿಲ್ಲೆ/ರಾಜ್ಯಗಳಿಂದ ಸಾರ್ವಜನಿಕರು ಈ ಪ್ರದೇಶವನ್ನು ಅವಲಂಬಿಸಿರುವುದರಿಂದ ವಾಹನ ದಟ್ಟನೆ ನಗರದ ಒಳಭಾಗದಲ್ಲಿ ಹೆಚ್ಚಾಗಿ ವಾಹನಗಳ ಸುಗಮ ಸಂಚಾರ ನಿಧಾನಗತಿಯಾಗಿದೆ.

ನಗರದ ಕೇಂದ್ರ ಭಾಗಕ್ಕೆ ಪ್ರವೇಶಿಸಲು ಹಾಗೂ ನಿರ್ಗಮಿಸಲು ಹೆಚ್ಚಿನ ವಾಹನಗಳು ನಗರದ ಮುಖ್ಯ ರಸ್ತೆಯಾದ ಹಂಪನಕಟ್ಟೆ – ಡಾ.ಅಂಬೇಡ್ಕರ್ ವೃತ್ತ - ಬಂಟ್ಸ್‌ಹಾಸ್ಟೇಲ್ / ಕರವಾಳ ವೃತ್ತವನ್ನು ಅಥವಾ ಕೆ.ಎಸ್.ರಾವ್ ರಸ್ತೆ - ಪಿ.ವಿ.ಎಸ್ – ಎಂ.ಜಿ ರಸ್ತೆಯಲ್ಲಿ ಹೋಗುವುದು ಹಾಗೂ ಬರುವುದು ಆಗಿರುತ್ತದೆ. ನಗರಕ್ಕೆ ಮಹಾಕಾಳಪಡ್ಪು ರಸ್ತೆ ಕಾಮಗಾರಿಯು ಮುಕ್ತಾಯಗೊಂಡಿದ್ದು ಹಾಗೂ ಉಳ್ಳಾಲ ಕೋಟೆಪುರದಿಂದ ಬೋಳಾರ ಕಡೆಗೆ ಬ್ರಿಡ್ಜ್‌ನ ನಿರ್ಮಾಣದ ಯೋಜನೆ ಇರುವುದರಿಂದ ನಗರದ ಕೇಂದ್ರ ಭಾಗದಲ್ಲಿ ವಾಹನದ ಸಂಚಾರದ ಹರಿವು ಹೆಚ್ಚಾಗಿ ಒತ್ತಡ ನಿರ್ಮಾಣವಾಗುವ ಸಾಧ್ಯತೆ ಇವೆ. ಅದ್ದರಿಂದ ಪ್ರಸ್ತುತ ಈಗ ಇರುವ ರಸ್ತೆ ಅಗಲ ಮತ್ತು ಸಂಚಾರ ಸಾಂದ್ರತೆಯನ್ನು ಪರಿಗಣಿಸಿ ಹೆಚ್ಚುವರಿ ರಸ್ತೆ ಅಭಿವೃದ್ಧಿಯನ್ನು ಕೈಗೊಳ್ಳುವುದು ಅನಿವಾರ್ಯವಾಗುತ್ತದೆ.

Scanned with OKEN Scanne

ಈ ಹಿನ್ನೆಲೆಯಲ್ಲಿ ನಗರದ ಒಳ ಭಾಗದಲ್ಲಿ ವಾಹನ ಸಂಚಾರದ ಸುಧಾರಣೆಗೆ ಕೈಗೊಳ್ಳಬಹುದಾದ ದೂರದೃಷ್ಟಿ ಯೋಜನೆಗಳ ವಿವರ ಕೆಳಗಿನಂತಿವೆ.

<u>ಬಂದರು ದಕ್ಕೆ – ಬೆಂಗ್ರೆ ಬ್ರಿಡ್ಜ್:- (ಹ್ಯಾಮಿಲ್ಟನ್ ವೃತ್ತ – ದಕ್ಕೆ – ಬೆಂಗ್ರೆ – ತಣ್ಣೀರು ಬಾವಿ ರಸ್ತೆ – ಕೆ.ಐ.ಓ.ಸಿ.ಎಲ್ ಜಂಕ್ಷನ್)</u>

- ಮಹಾಕಾಳಿ ಪಡ್ಪು ಬ್ರಿಡ್ಜ್ ಕಾಮಗಾರಿ ಪೂರ್ಣಗೊಂಡಿದ್ದು, ಇದರಿಂದ ಎ.ಬಿ ಶೆಟ್ಟಿ ವೃತ್ತ – ರಾವ್ & ರಾವ್ ರಸ್ತೆ – ಹಂಪನಕಟ್ಟೆ ರಸ್ತೆಯಲ್ಲಿ ವಾಹನ ದಟ್ಟನೆ ಉಂಟಾಗಿದ್ದು, ಪರ್ಯಾಯ ವ್ಯವಸ್ಥೆ ಮಾಡಬೇಕಾಗಿರುತ್ತದೆ.
- ಉಳ್ಳಾಲ ಕೋಟೆಪುರ ದಿಂದ ಬೋಳಾರಕ್ಕೆ ಸಂಪರ್ಕಿಸಲು ಬ್ರಿಡ್ಜ್ ಕಾಮಗಾರಿಯ ಪ್ರಸ್ತಾಪವಿದ್ದು, ಇದರಿಂದ ಸಿಟಿಯ ಒಳಭಾಗದಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ದಕ್ಕೆ – ಬೆಂಗ್ರೆಗೆ (ತಣ್ಣೀರು ಬಾವಿ) ಸಂಪರ್ಕಿಸುವ ಬ್ರಿಡ್ಜ್ ಅವಶ್ಯಕವಾಗಿರುತ್ತದೆ.
- ಮಹಾಕಾಳಿ ಪಡ್ಪು ರಸ್ತೆ ಹಾಗೂ ಉಳ್ಳಾಲ ಕೋಟೆಪುರ ಕಡೆಗಳಿಂದ ವಾಹನಗಳು ನಗರದ ಒಳಗೆ ಪ್ರವೇಶಿಸಿದಲ್ಲಿ ಕ್ಲಾಕ್ ಟವರ್, ಹಂಪನಕಟ್ಟೆ, ಅಂಬೇಡ್ಕರ್ ವೃತ್ತ ಕಡೆಗಳಲ್ಲಿ ಟ್ರಾಫಿಕ್ ಅತಿರೇಕವಾಗಿ ವಾಹನ ಸಂಚಾರದಲ್ಲಿ ವ್ಯತ್ಯಯವಾಗುವ ಸಾಧ್ಯತೆಗಳಿರುವುದರಿಂದ ಪರ್ಯಾಯ ವ್ಯವಸ್ಥೆಗಾಗಿ ಸದ್ರಿ ಬ್ರಿಡ್ಜಿನ ಅವಶ್ಯಕತೆ ಇರುತ್ತದೆ.

<u>ಕ್ಲಾಕ್ ಟವರ್ – ಅಂಬೇಡ್ಕರ್ ವೃತ್ತದಿಂದ ಕರಾವಳಿ ವೃತ್ತ ಫ್ಲೈ ಓವರ್</u>

- ರಸ್ತೆಗಳು ಕಿರಿದಾಗಿದ್ದು, ವಾಹನ ಪಾರ್ಕಿಂಗ್ ವ್ಯವಸ್ಥೆ ಸರಿಯಾಗಿಲ್ಲ.
- ನಗರ ಕೆ.ಬಿ ಕಟ್ಟೆ, ಹಂಪನಕಟ್ಟೆ, ಅಂಬೇಡ್ಕರ್ ವೃತ್ತ, ಬಲ್ಮಠ ಜಂಕ್ಷನ್ (ಕಲೆಕ್ಟರ್ಸ್ ಗೇಟ್ ಜಂಕ್ಷನ್), ಬೆಂದೂರುವೆಲ್ ಜಂಕ್ಷನ್ , ಕರಾವಳಿ ವೃತ್ತದಲ್ಲಿ ಹೆಚ್ಚು ಸಂಚಾರ ದಟ್ಟಣೆ ಇರುವ ಪ್ರದೇಶವಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ.
- ನಗರದ ಸರ್ವಿಸ್ ಬಸ್ಸು ನಿಲ್ದಾಣದಿಂದ ಹೊರಡುವ ಸುಮಾರು 600 ಬಸ್ಸುಗಳು ರಾವ್&ರಾವ್ ವೃತ್ತದಿಂದ –ಕ್ಲಾಕ್ ಟವರ್ – ಹಂಪನಕಟ್ಟೆ – ಬಾವುಟಗುಡ್ಡ ಮುಖಾಂತರ ಸಂಚರಿಸುವುದಾಗಿದೆ.
- ಸದ್ರಿ ರಸ್ತೆಯಲ್ಲಿ ಬಸ್ಸು ಬೇ ಇರುವುದಿಲ್ಲ. ಸದ್ರಿ ರಸ್ತೆಯಲ್ಲಿ ಬಸ್ಸುಗಳು ಬೋಗಿಗಳತೆ ಸಾಗಲ ನಿಂತು ಪ್ರಯಾಣಿಕರನ್ನು ಹತ್ತಿಸುತ್ತಿರುವುದಾಗಿದೆ. ರಸ್ತೆಯ ಅರ್ಧಭಾಗವನ್ನು ಬಸ್ಸುಗಳು ಆವರಿಸುವುದುದಾಗಿದೆ.
- ಪ್ರಾಯಾಣಿಕರು ರಸ್ತೆಯಲ್ಲಿ ಅಲ್ಲಲ್ಲಿ ನಿಂತು ರಸ್ತೆಗೆ ಬಂದು ಬಸ್ಸುಗಳು ಹತ್ತುತ್ತಿರುವುದಾಗಿದೆ.
- ಕೆ.ಬಿಕಟ್ಟೆ ಜಂಕ್ಷನ್, ಜ್ಯೋತಿ ಜಂಕ್ಷನ್, ಬಲ್ಮಠ ಜಂಕ್ಷನ್‌ನಲ್ಲಿ ಸಂಚಾರ ಸುಧಾರಣೆಯಾಗುತ್ತದೆ.

<u>ಪಿ.ಎಸ್ ವೃತ್ತದಿಂದ ನಾರಯಣಗುರು ವೃತ್ತ ಫ್ಲೈ ಓವರ್</u>

- ಸದ್ರಿ ಸರ್ಕಲ್ ಮುಖಾಂತರ ನಿರ್ಮಿಸಿದಲ್ಲಿ ನೇರವಾಗಿ ನಾರಾಯಣ ಗುರು ವೃತ್ತ ಮುಖಾಂತರ ಕೊಟ್ಟಾರ ಚೌಕಿ ರಾಷ್ಟ್ರೀಯ ಹೆದ್ದಾರಿ ತಲುಪಬಹುದಾಗಿದೆ.
- ಸದ್ರಿ ರಸ್ತೆಯಲ್ಲಿ ಹೆಚ್ಚಿನ ಶಾಪಿಂಗ್ ಅಂಗಡಿಗಳಿದ್ದು, ಶಾಲಾ/ಕಾಲೇಜುಗಳಿದ್ದು, ವಾಹನ ದಟ್ಟಣೆ ಉಂಟಾಗುತ್ತಿರುವುದಾಗಿದೆ.

Scanned with OKEN Scanner

- ಎಂ.ಜಿ ರಸ್ತೆಯು ನಗರ ಪ್ರಮುಖ ರಸ್ತೆಯಲ್ಲಿ, ಈ ರಸ್ತೆಯಲ್ಲಿ ಬೆಸೆಂಟ್ ಸ್ಕೂಲ್ ಜಂಕ್ಷನ್, ಕೋ..ಡಿಯಲ್‌ಗುತ್ತು ಜಂಕ್ಷನ್, ಬಳ್ಳಾಲ್‌ಬಾಗ್ ಜಂಕ್ಷನ್, ಲಾಲ್‌ಬಾಗ್ ಜಂಕ್ಷನ್ ವಾಹನ ದಟ್ಟಣೆಯಿಂದ ಕುರಿತು ವಾಹನ ಸಂಚಾರದಲ್ಲಿ ವ್ಯತ್ಯಯವಾಗುತ್ತಿರುವುದಾಗಿದೆ.
- ಸದರಿ ರಸ್ತೆಯಲ್ಲಿ ಅನೇಕ ಅಡ್ಡ ರಸ್ತೆಗಳಲ್ಲಿ, ಒಳ ರಸ್ತೆಯಿಂದ ಬರುವ ವಾಹನದಿಂದ ಮುಖ್ಯ ರಸ್ತೆಯ ವಾಹನ ಸಂಚಾರದಿಂದ ತೊಂದರೆಯಾಗುತ್ತಿರುವುದಾಗಿದೆ.

**<u>ಪಾಡಿ ಯಿಂದ ಏರ್‌ಪೋರ್ಟ್ ಹೊರಂಗಣ ಪ್ರದೇಶದ ಮೂಲಕ ಸುರತ್ಕಲ್ ತಲುಪಲು ರಿಂಗ್ ರೋಡ್</u>**

- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ 7.5 ಲಕ್ಷ ವಾಹನಗಳು ನೊಂದಣಿಯಾಗಿದ್ದು, ಜೊತೆಗೆ ನೆರೆ ರಾಜ್ಯಗಳಿಂದ, ವಿದ್ಯಾರ್ಥಿಗಳು, ಪ್ರವಾಸಿಗರು, ಏರ್‌ಪೋರ್ಟ್‌ಗೆ ಬರುವವರ ಸಂಖ್ಯೆ ವೃದ್ಧಿಸುತ್ತಿದ್ದು, ಇದರಿಂದ ಮುಂದಕ್ಕೆ ನಗರದಲ್ಲಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಹೆಚ್ಚು ಸಂಚಾರ ದಟ್ಟಣೆಯಾಗಿ ಸಾರ್ವಜನಿಕರಿಗೆ ತೊಂದರೆಯಾಗಲಿದೆ.
- ರಾಷ್ಟ್ರೀಯ ಹೆದ್ದಾರಿ-66ಯಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಹಾಗೂ ಪ್ರಮುಖ ಜಂಕ್ಷನ್ ಆದ ತೊಕ್ಕೊಟ್ಟು, ಕಲ್ಲಾಪು, ಪಂಪ್‌ವೆಲ್, ನಂತೂರು, ಕೆ.ಪಿ.ಟಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಪರ್ಯಾಯ ರಿಂಗ್ ರೋಡ್ ಮಾಡುವ ಅವಶ್ಯಕತೆ ಇರುತ್ತದೆ.
- ಅದ್ದರಿಂದ ತಲಪಾಡಿಯಿಂದ - ಸುರತ್ಕಲ್ ಮುಖಾಂತರ ಹೆಜಮಾಡಿಗೆ ರಿಂಗ್ ರೋಡ್‌ಗೆ ನಿರ್ಮಾಣದ ಅವಶ್ಯಕತೆ ಇರುತ್ತದೆ.

ಮೇಲ್ಕಂಡ ಯೋಜನೆಯ ಅನುಸಾರವಾಗಿ ಮುಂದಿನ ಕಾಲಘಟದಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಮತ್ತು ಂಚಾರ ಸುಧಾರಣೆಯ ಸಾರ್ವಜನಿಕರ ಹಿತದೃಷ್ಟಿಯಿಂದ ದೂರದೃಷ್ಟಿ ಯೋಜನೆಯನ್ನು ಕೈಗೊಳ್ಳುವುದು ಅತ್ಯಂತ ತ್ಯವಾಗಿದೆ. ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸಂಬಂಧಪಟ್ಟ ಇಲಾಖೆಯ ಮುಖಾಂತರ ಸರ್ಕಾರಕ್ಕೆ ಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಪೊಲೀಸ್ ಅಯುಕ್ತರು
ಮಂಗಳೂರು ನಗರ

ಅನುಬಂಧ-3

| Sl. No | TRAFFIC VIOLATIONS | 2025 |
|---|---|---|
| 1. | Drunken driving | 595 |
| 2. | Over Speeding | 540 |
| 3. | Wrong Parking /Hapazard parking and dangerous parking | 323 |
| 4. | Hapazard parking and dangerous parking on NATIONAL Highways | 0 |
| 5. | Footpath Parking | 252 |
| 6. | Using Mobile Phone while on driving | 116 |
| 7. | Riding without Helmet | 11857 |
| 8. | Driving Without Safety Belt | 20387 |
| 9. | Footpath Encroachment | 0 |
| 10. | Jumping Traffic Signal/Red light signal jumping | 34 |
| 11. | Over Loading | 0 |
| 12. | Reckless driving | 304 |
| 13. | Driving /riding Without License | 171 |
| 14. | Carrying passengers in dangerous manner | 0 |
| 15. | Use of High beam lights | 416 |
| 16. | Roof top travelling | 1 |
| 17. | Defective Silencerg | 131 |
| 18. | Shrill Horn | 101 |
| 19. | Auto Rickshaw Demanding .excess fare | 14 |
| 20. | Auto Rickshaw Refuse to go for hire | 0 |
| 21. | School bus/van carrying excess school children | 95 |
| 22. | Carrying excess Passenger | 24930 |
| 23. | Carrying passengers in goods vehicles | 1366 |
| 24. | Auto rickhshaw Carrying Excess School Children | 83 |
| 25. | Without Display card | 10 |
| 26. | Use of horn at Prohibited Places | 2 |
| 27. | Free wheeling | 0 |
| 28. | Black film | 696 |
| 29. | Lane Discipline | 1440 |
| 30. | Over taking by left | 2 |

| | | |
|---|---|---|
| 31. | Parked at BMTC bus stop | 20 |
| 32. | Defective register no Plate | 794 |
| 33. | No Entry | 456 |
| 34. | HTV Prohibited | 0 |
| 35. | Without Uniform | 2781 |
| 36. | Without Insurance Certificate | 42 |
| 37. | Dazzling head light | 63 |
| 38. | Triple riding | 404 |
| 39. | Racing and trails of Speed | 0 |
| 40. | Carrying Lengthy material | 135 |
| 41. | Violating Permit Condition | 0 |
| 42. | Pillion Rider-Without Helmet | 8557 |
| 43. | Zig Zag Driving | 44 |
| 44. | Parked at intersection | 26 |
| 45. | Riding on Footpath | 73 |
| 46. | Not Produced documents | 9252 |
| 47. | Other traffic Violation | 9097 |
| | Total | 95,610 |

ಅನುಬಂಧ-2

**Office of Commissioner of Police, Mangaluru City, Mangaluru**
**Near A.B Shetty Circle, Pandeshwar, Mangaluru**
Ph No 0824-2220801
Email: ccrmgc@ksp.gov.in

**************************************************************************************

No: CRM-3/166/COP/M.City/2026 Date: 12-02-2026

**************************************************************************************

To,

1. The Commissioner
   Mangaluru City Corporation,
   Mangaluru.
2. The Managing Director
   Mangaluru Smart City Limited
   Mangaluru City Corporation,
   Mangaluru.
3. The Project Director
   National Highways Authority of India
   Tharethota, Mangaluru.

Sir,

Subject : Request for Junction improvement and Installation of traffic signals and other measures/works at Nanthoor Junction for proper traffic regulation and public safety– Reg.

Reference: : 1) District Road Safety Authority meeting dated 05-02-2026
2) Co-ordination Meeting with NHAI, MCC and Police - Joint inspection held on 07-02-2026
3) DCP Crime & Traffic, Mangalore City Letter No: CRM3/165/MC/2026, Date: 12-02-2026

*********

It has been observed that Nanthoor junction is a major and heavily congested intersection connecting Udupi – Kerala highway (NH 66) and also one of the primary entry points to Mangalore City from Puttur, Moodabidre, Kerala and other local surrounding areas. The Junction also loaded with significant movement of Lorries and heavy goods vehicles including tankers and other transport vehicles operating from major industrial establishments. such as NMPA, MRPL, MCF, IOCL and other major industries. Enroute to Kerala, and many parts of Karnataka State including Bengaluru. In addition the junction caters to local traffic, including school buses and other commuters.

Due to high traffic volume and existing deficiencies such as an unscientific junction layout, undulating road conditions, absence of traffic signals, lack of free left turn, inadequate lighting and poor traffic engineering works. Further the area frequently witnesses more accidents, (Black spots) severe traffic congestion and obstructions.

In addition to these factors, the absence of traffic signal lights makes traffic regulation extremely challenging and very difficult for the traffic police personnel, who must stand at the centre of the junction and manually regulating heavy traffic flow coming from all directions at high risk while performing their duties.

Scanned with OKEN Scanne

For the above reasons, on 07-02-2026, officers from various departments jointly visited and inspected Nanthoor Junction with a view to preventing accidents and ensuring smooth vehicular movement.

During the inspection, certain observations were made which require immediate intervention in respect of road leveling at intersection area, providing a free left lanes, installation of signal lights, shifting of High mask lights, Road markings, and installation of traffic furniture to ease congestion, reduce delays in vehicular movement, and address safety concerns of road users.

Accordingly, the details of works to be undertaken by the National Highways Authority of India, Mangaluru City Corporation, and Mangaluru Smart City Limited for the development and improvement of Nanthoor Junction are enumerated below:

**Works to be undertaken by Mangaluru City Corporation(MCC):**

1. The existing High Mask Light installed by MCC at the junction is required to be shifted near the railings on the Padavu side where vehicles merge into the junction.
2. Road widening is required near Premier Corner Building. However, the presence of an MCC drinking water pipeline is obstructing the widening work. Hence, the said pipeline needs to be relocated.
3. The traffic island from Shivabagh Junction towards Nanthoor Junction is excessively wide. It is necessary to reduce its width and carry out road widening. The overgrown vegetation in the island area also needs to be cleared.

In the interest of traffic safety, MCC is requested to extend cooperation to NHAI by urgently relocating the High Mast Light, shifting the drinking water pipeline, and modifying the traffic island.

**Works to be undertaken by Mangaluru Smart City Limited:**

- Nanthoor Junction is a four-road intersection, and manual regulation of traffic has become difficult due to heavy vehicular movement, Therefore, **traffic signal lights** need to be installed at all four directions of the junction to scientifically regulate vehicular movement.

**Works to be undertaken by National Highways Authority of India(NHAI):**

1. Vehicles moving from Bikarnakatte towards Padavu side, and from Mallikatte towards Bikarnakatte side are facing difficulty due to a raised road surface (high point) at one side of the junction, resulting in slow movement and congestion. Hence, proper leveling of the entire junction is required.
2. During the rainy season rainwater accumulates on the road at Nanthoor Junction, owing to the lack of an effective drainage system, causing traffic disruption and safety hazards. Improvement and provision of proper drainage facilities are urgently required.
3. Road widening work is required at Nanthoor Junction particularly near Premier Corner Building, towards Padavu side, as the existing road width is inadequate for free left movement of vehicles.
4. Since Nanthoor junction is a major accident vulnerable spot, increased visibility is required, which is the High Mast Light installed at the center of Nanthoor Junction needs to be shifted near the railings on the Padavu side at Junction, as

Scanned with OKEN Scanne

s present location affects junction management. A new High Mast Light may be installed near the Police Umbrella, to ensure adequate illumination at night.

5. To clearly demarcate the junction center during night hours, red-colored movable water barricades may be placed at the center of the junction.
6. From Padavu Junction towards Nanthoor Junction, lane separators using concrete barricades are required at the junction to facilitate free left movement of vehicles towards Bikarnakatte side.
7. From Pumpwell side towards Shivabagh Junction, the existing island should be reduced, and lane separators using concrete barricades are required, to allow free left movement of vehicles.
8. All four-side shoulders at Nanthoor Junction require filling and equal levelling, to improve safety and smooth vehicular movement.
9. Post leveling of the entire junction & free left lane median separator installed, it is need to install traffic signal lights at Junction, which shall operate round-the-clock (24×7) for effective traffic regulation.
10. Centre median railings need to be installed from Nanthoor Junction to Bikarnakatte Junction and from Nanthoor Junction to Shivabagh Junction, to prevent pedestrian criss crossing on the road.
11. At Nanthoor Junction, the left parapet/island from Pumpwell side needs to be cut down to enable smooth free-left movement towards Shivabagh side.
12. At Nanthoor Junction Bikarnakatte side centre median needs to be cut 5 feet, to enable fast movement of vehicles towards Padavu side.
13. Proper road direction and lane informatory signboards are required to be installed at the junction, for better driver awareness.
14. Installation of Solar Blinkers and reflective Studs are required at the junction to enhance night-time visibility and improve road safety.

In order to prevent accidents and ensure smooth vehicular movement at Nanthoor Junction, the above works and traffic installations are essential. Hence concerned units are requested to take measures on priority.

**The matter may kindly be treated as urgent.**

Thanking you.

Commissioner of Police
Mangaluru City, Mangaluru

Mangalore City, Mang...

Copy submitted to:- Deputy Commissioner and President, District Road Safety committee, D.K District

Scanned with OKEN Scanne

ಅನುಬಂಧ-4

ನಂಬ್ರ: ಡಿಸಿಪಿ(ಅ ಮತ್ತು ಸಂ)/೮೪ /ಮಂ ನ/2025

ಪೊಲೀಸ್ ಆಯುಕ್ತರ ಕಛೇರಿ
ಮಂಗಳೂರು ನಗರ, ಮಂಗಳೂರು
ದಿನಾಂಕ: 05-02-2025

ಇವರಿಗೆ,

ಆಯುಕ್ತರು,
ಮಂಗಳೂರು ಮಹಾ ನಗರ ಪಾಲಿಕೆ
ಮಂಗಳೂರು.

ಮಾನ್ಯರೇ,

ವಿಷಯ : ನಗರದ ಹಾಮಿಲ್ಟನ್ ವೃತ್ತ ಮತ್ತು ಅಂಬೇಡ್ಕರ್ ವೃತ್ತದ ಜಂಕ್ಷನ್ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಲು ಎನ್.ಎಂ.ಟಿ.ಕೆ ತಂತ್ರಜ್ಞರ ತಂಡಕ್ಕೆ ಮಾಹಿತಿಯನ್ನು / Traffic Data ಒದಗಿಸುವ ಕುರಿತು.

ಉಲ್ಲೇಖ : 1) ಸಿವಿಲ್ ಇಂಜಿನಿಯರಿಂಗ್ ವಿಭಾಗ ಎನ್.ಐ.ಟಿ.ಕೆ ಸುರತ್ಕಲ್ ರವರ ಪತ್ರ ಸಂಖ್ಯೆ: NITK/CED/T&C/2025/06 Dated 04-02-2025.
2) ದಿನಾಂಕ 03-02-2025 ರಂದು ಮೇಲ್ಕಂಡ 2 ವೃತ್ತಗಳ ಪರಿಶೀಲನಾ ಸಮಯದಲ್ಲಿ ತೆಗೆದುಕೊಂಡ ನಿರ್ಣಯ

*******************

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ 03-02-2025 ರಂದು ನಗರದ ಹಾಮಿಲ್ಟನ್ ವೃತ್ತ ಮತ್ತು ಅಂಬೇಡ್ಕರ್ ವೃತ್ತದ ಜಂಕ್ಷನ್ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಲು ಗೌರವಾನ್ವಿತ ಮೇಯರ್, ಪೊಲೀಸ್ ಅಧಿಕಾರಿಗಳು, ಪಾಲಿಕೆ ಅಧಿಕಾರಿಗಳು, ಸ್ಮಾರ್ಟ್ ಸಿಟಿ ಅಧಿಕಾರಿಗಳು, ಎನ್.ಐ.ಟಿ.ಕೆ ಯ ತಂತ್ರಜ್ಞರೊಂದಿಗೆ ಸಭೆಯನ್ನು ನಡೆಸಿ ಚರ್ಚಿಸಿದ್ದು, ಮುಂದುವರೆದು ನಗರದ ಹಾಮಿಲ್ಟನ್ ವೃತ್ತ ಹಾಗೂ ಅಂಬೇಡ್ಕರ್ ವೃತ್ತದಲ್ಲಿ ಜಂಕ್ಷನ್ ಅಭಿವೃಧಿ ಬಗ್ಗೆ ಜಂಟಿಯಾಗಿ ಸ್ಥಳ ಪರಿಶೀಲನೆಯನ್ನು ನಡೆಸಿರುವುದಾಗಿದೆ.

ಈ ಕುರಿತಂತೆ ಸದರಿ ಜಂಕ್ಷನ್‌ಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಹಾಗೂ ಜಂಕ್ಷನ್ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯನ್ನು ರೂಪಿಸುವ ಸಲುವಾಗಿ ಎನ್.ಐ.ಟಿ.ಕೆ ಸುರತ್ಕಲ್‌ನ ತಾಂತ್ರಿಕ ತಂಡಕ್ಕೆ ಉಲ್ಲೇಖ(1) ಪತ್ರದಲ್ಲಿ ಮಾಹಿತಿಗಳನ್ನು ನೀಡುವಂತೆ ಕೋರಿಕೊಂಡಿದ್ದು, ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ತಮ್ಮಿಂದ ಮತ್ತು ಸ್ಮಾರ್ಟ್ ಸಿಟಿ ಅಧಿಕಾರಿಗಳಿಂದ ತಜ್ಞರ ತಂಡವನ್ನು ನೇಮಿಸಿ ಮಾಹಿತಿಯನ್ನು ಸಂಗ್ರಹಿಸಿ ಎನ್.ಐ.ಟಿ.ಕೆ ಪ್ರೊಫೆಸರ್‌ರವರಿಗೆ ಸದ್ರಿ ಜಂಕ್ಷನ್ ಅಭಿವೃಧಿ ಯೋಜನೆ ರೂಪಿಸಲು ಚರ್ಚಿಸಲಾಯಿತು.

ಈ ವಿಚಾರಕ್ಕೆ ಸಂಬಂಧಪಟ್ಟಂತೆ ಎನ್.ಐ.ಟಿ.ಕೆ ಸಿವಿಲ್ ವಿಭಾಗ ರವರು ಕಳುಹಿಸಿರುವ ಪತ್ರವನ್ನು ಇದರೊಂದಿಗೆ ಲಗತ್ತಿಸಿದ್ದು, ಮುಂದಿನ ಕ್ರಮದ ಬಗ್ಗೆ ಸಲ್ಲಿಸಲಾಗಿದೆ. ಸದ್ರಿ ಪತ್ರದಲ್ಲಿ ಕೋರಿರುವಂತೆ ಮಾಹಿತಿಯನ್ನು ತಮ್ಮಿಂದ ನಿಯೋಜಿಸುವ ತಂಡದಿಂದ ಸಂಗ್ರಹಿಸಿ ಒದಗಿಸಲು ಕೋರಿದೆ.

ಉಪ ಪೊಲೀಸ್ ಆಯುಕ್ತರು
ಅಪರಾಧ ಮತ್ತು ಸಂಚಾರ
**Deputy Commissioner of Police**
**(Crime & Traffic)**
**Mangaluru City, Mangaluru**

ಪ್ರತಿ:

1) ಸಹಾಯಕ ಪೊಲೀಸ್ ಆಯುಕ್ತರು, ಮಂ.ಸಂಚಾರ ಉಪ ವಿಭಾಗ, ಮಂಗಳೂರು
2) Professor & Head, Department of Civil Engineering, NITK, Surathkal, Mangaluru

ಪ್ರತಿ ವಂದನೆಗಳೊಂದಿಗೆ,

ಮಾನ್ಯ ಪೊಲೀಸ್ ಆಯುಕ್ತರು, ಮಂಗಳೂರು ನಗರ, ಮಂಗಳೂರು.

ಸಿವಿಲ್ ಇಂಜಿನಿಯರಿಂಗ್ ವಿಭಾಗ / सिविल अभियांत्रिकी विभाग
ಶ್ರೀನಿವಾಸನಗರ ಪೋಸ್ಟ್, ಮಂಗಳೂರು-೫೭೫೦೨೫, ಕರ್ನಾಟಕ, ಭಾರತ / पोस्ट श्रीनिवासनगर, मंगलूरु-५७५०२५, कर्नाटक, भारत

**DEPARTMENT OF CIVIL ENGINEERING**

NATIONAL INSTITUTE OF TECHNOLOGY KARNATAKA, SURATHKAL
**POST SRINIVASNAGAR, MANGALURU – 575 025, KARNATAKA, INDIA**

Ref. No. NITK/CED/T & C/2025/06 **Date :** 04.02.2025

**To**
**The Deputy Police Commissioner (Crime & Traffic)**
**Mangalore City, Mangalore.**

Dear Sir,

__Subject:__ Scope and data requirement for providing junction improvement for Hamilton Circle and Ambedkar Circle

__Reference:__ Your letter bearing reference No. ಡಿಸಿಪಿ(ಅ ಮತ್ತು ಸಂ)/03/ಮಂ.ನ/2025 dated 01.02.2025

With reference to above referred letter, on 3rd February 2025 we had a meeting with concerned police officials, Corporation officials and Mayor of Mangaluru and his team in Mayor's office. In the meeting and after subsequent site visit, it was resolved to collect the Traffic data from Hamilton Circle and Ambedkar Circle and to be made available for analysis by NITK Surathkal. So, the following are the scope, data requirement and time required for providing junction improvement for Hamilton Circle and Ambedkar Circle.

**__Scope of the work__**

1. Analysis of the traffic flows at the Hamilton Circle and Ambedkar Circle in Mangalore as per IRC codes and Indo-HCM.
2. Design/vetting of the proposed design of the improved junction as per IRC guidelines.
3. The analysis and design will be restricted to the intersections and their approaches for a length of 100m. The redistribution of flow patterns elsewhere other than the intersections and their approaches are beyond the scope of the present study.

**__Data Required at Hamilton Circle and Ambedkar Circle__**

1. Classified Turning Movement Count of Vehicle entering the intersection from each of the approaches for 7 days from 6.00 AM to 10.00 PM. Vehicular classification to be followed as per "IRC 65-2017: Guidelines for Planning and Design of Roundabouts". Vehicular classification - two wheelers, three wheelers, big cars, small cars, Light Commercial Vehicles (LCVs), trucks, buses, bicycles, etc.
2. Volume of pedestrians moving along the roads and crossing each of the approaches for 7 days from 6.00 AM to 10.00 PM.
3. The Classified Turning Movement Counts and Pedestrian volume counts (mentioned in points 1 and 2) are to be provided in the form of MS Excel sheets, with 15minute count interval.
4. AutoCAD drawing of the existing intersections covering at least 100m length on each of the approaches showing all physical features such as bus stops, bus shelters, other minor intersections, electric posts, lamp posts, electric lines, footpaths, etc.
5. AutoCAD drawings of the proposed changes at the intersection, including the direction of the proposed traffic flows.

**__Time Required__**

1. Minimum 10 working days once the aforementioned data (in softcopy) is received.

Dr. Raviraj H M and Dr. Mithun Mohan
(Faculty Civil Engineering Department)

Prof. B Manu
(Professor & Head)
**Professor & Head**
**Department of Civil Engineering**

ಅನುಬಂಧ-5

ಪೊಲೀಸ್ ಆಯುಕ್ತರ ಕಛೇರಿ, ಎ. ಬಿ.ಶೆಟ್ಟಿ ವೃತ್ತದ ಬಳಿ, ಮಂಗಳೂರು ನಗರ, 575001
ದೂ.ಸಂ: 0824-2220810 ಈ-ಮೇಲ್ ವಿಳಾಸ: ccrmgc@ksp.gov.in

ಸಂಖ್ಯೆ:ಸಿ.ಆರ್.ಎಂ-3/737/ಮಂ.ನ/2025

ದಿನಾಂಕ:21 -10-2025

ಇವರಿಗೆ

ಆಯುಕ್ತರು
ಮಂಗಳೂರು ಮಹಾನಗರ ಪಾಲಿಕೆ
ಮಂಗಳೂರು

ಮಾನ್ಯರೇ,

ವಿಷಯ : ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಅಲ್ಪಕಾಲಿಕ, ಮಧ್ಯಕಾಲಿಕ ಮತ್ತು ದೀರ್ಘಕಾಲಿಕ ಬಾಕಿ ಇರುವ ಕಾಮಗಾರಿಗಳನ್ನು ಶೀಘ್ರವಾಗಿ ನಡೆಸುವ ಕುರಿತು.

ಉಲ್ಲೇಖ : ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪವಿಭಾಗ, ಮಂಗಳೂರು ನಗರ ರವರ ಪತ್ರ ಸಂಖ್ಯೆ: 330(A)/ಸಾಮಾನ್ಯ/ಎಸಿಪಿ ಸಂಚಾರ/2025, ದಿನಾಂಕ: 24-09-2025

*****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಂಗಳೂರು ನಗರದಲ್ಲಿ ಹಾದು ಹೋಗುವ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆ/ಜಂಕ್ಷನ್‌ಗಳಲ್ಲಿ ಅಲ್ಪಕಾಲಿಕ, ಮಧ್ಯಕಾಲಿಕ ಮತ್ತು ದೀರ್ಘಕಾಲಿಕ ಬಾಕಿ ಇರುವ ಕಾಮಗಾರಿಗಳನ್ನು ಶೀಘ್ರವಾಗಿ ನಡೆಸಲು ಕ್ರಮ ಕೈಗೊಂಡು ವಾಹನಗಳ ಸುಗಮ ಸಂಚಾರಕ್ಕೆ ಮತ್ತು ರಸ್ತೆ ಸುರಕ್ಷತೆ ಅನುಕೂಲ ಮಾಡಿಕೊಡುವಂತೆ ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪವಿಭಾಗ, ಮಂಗಳೂರು ನಗರ ರವರು ಪರಿಶೀಲನೆ ನಡೆಸಿ ಸಲ್ಲಿಸಿದ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಆದ್ದರಿಂದ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆ/ಜಂಕ್ಷನ್‌ಗಳಲ್ಲಿ ಅಲ್ಪಕಾಲಿಕ, ಮಧ್ಯಕಾಲಿಕ ಮತ್ತು ದೀರ್ಘಕಾಲಿಕ ಬಾಕಿ ಇರುವ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ನಡೆಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಈ ಕಛೇರಿಗೆ ಒದಗಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಉಪ ಪೊಲೀಸ್ ಆಯುಕ್ತರು,
ಅಪರಾಧ & ಸಂಚಾರ,
ಮಂಗಳೂರು ನಗರ, ಮಂಗಳೂರು.

ಪ್ರತಿ ಗೌರವಪೂರ್ವಕವಾಗಿ:

1) ಮಾನ್ಯ ಪೊಲೀಸ್ ಆಯುಕ್ತರು, ಮಂಗಳೂರು ನಗರ, ಮಂಗಳೂರು
2) ಅಧ್ಯಕ್ಷರು, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಹಾಗೂ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪ್ರತಿ ಮಾಹಿತಿಗಾಗಿ:

1) ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
2) ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪವಿಭಾಗ, ಮಂಗಳೂರು ನಗರ

Scanned with OKEN Scanne

ಅನುಬಂಧ-6

**ಪೊಲೀಸ್ ಆಯುಕ್ತರ ಕಛೇರಿ, ಎ. ಬಿ.ಶೆಟ್ಟಿ ವೃತ್ತದ ಬಳಿ, ಮಂಗಳೂರು ನಗರ, 575001**

**ದೂ.ಸಂ: 0824-2220810 ಈ-ಮೇಲ್ ವಿಳಾಸ: ccrmgc@ksp.gov.in**

ಸಂಖ್ಯೆ:ಸಿ.ಆರ್.ಎಂ-3[illegible]/ಮಂ.ನ/2025

ದಿನಾಂಕ: 17-06-2025

ಇವರಿಗೆ

ಯೋಜನಾ ನಿರ್ದೇಶಕರು
ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ
ನಂ 3-29, ಬೆಥೆಲ್, ತಾರೆತೋಟ
ಪಂಪ್‌ವೆಲ್ ಹತ್ತಿರ, ಮಂಗಳೂರು- 575005

ಮಾನ್ಯರೇ,

ವಿಷಯ : ಮಂಗಳೂರು ನಗರದ ರಾಷ್ಟ್ರೀಯ ಹೆದ್ದಾರಿ 66 ರ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಹೊಂಡ ಗುಂಡಿಗಳನ್ನು ಮುಚ್ಚುವ ಕುರಿತು.

ಉಲ್ಲೇಖ : ಪೊಲೀಸ್ ನಿರೀಕ್ಷಕರು, ಸಂಚಾರ ಉತ್ತರ ಪೊಲೀಸ್ ಠಾಣೆರವರ ಪತ್ರ ಸಂಖ್ಯೆ /ಸಂ.ಉ.ಠಾ/2025, ದಿನಾಂಕ: 07-06-2025



*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಮಂಗಳೂರು ನಗರದ ರಾಷ್ಟ್ರೀಯ ಹೆದ್ದಾರಿ 66 ರಸ್ತೆಯಲ್ಲಿರುವ ಡಾಮಾರು ಕಿತ್ತು ಹೋಗಿ ರಸ್ತೆಯಲ್ಲಿ ಹೊಂಡ ಗುಂಡಿಗಳು ನಿರ್ಮಾಣವಾಗಿ ಮೋಟಾರ್ ಸೈಕಲ್ ಸವಾರರಿಗೆ ಹಾಗೂ ಇತರ ವಾಹನಗಳ ಚಾಲಕರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ. ಸದ್ರಿ ಹೊಂಡ ಗುಂಡಿಗಳಿಂದ ಮಾರಣಾಂತಿಕ ಅಪಘಾತಗಳು ಉಂಟಾಗುವ ಸಂಭವವಿರುತ್ತದೆ. ಆದುದರಿಂದ ರಸ್ತೆಯಲ್ಲಿ ನಿರ್ಮಾಗೊಂಡಿರುವ ಹೊಂಡ ಗುಂಡಿಗಳನ್ನು ಮುಚ್ಚಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಈ ಕಛೇರಿಗೆ ಒದಗಿಸುವಂತೆ ಕೋರಲಾಗಿದೆ.


ಮಳೆಗಾಲದಲ್ಲಿ ರಸ್ತೆಯಲ್ಲಿ ನೀರು ನಿಂತು ಹೊಂಡ ಗುಂಡಿ ನಿರ್ಮಾಣವಾಗಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| ಕ್ರಸಂ | ಗುಂಡಿ ಬಿದ್ದಿರುವ ಸ್ಥಳ | ಅಂಕ್ಷಾಂಶ ಮತ್ತು ರೇಖಾಂಶ | ಫೋಟೋ |
|---|---|---|---|
| 1. | ಎನ್.ಹೆಚ್.66<br>ಕೋಡಿಕಲ್ ಕ್ರಾಸ್ | 12.913937<br>74.834773 |  |
| 2. | ಎನ್.ಹೆಚ್.66<br>ಕೂಳೂರು ಜಂಕ್ಷನ್ | 12.923548<br>74.829628 |  |


Scanned with OKEN Scanne

| | | | |
|---|---|---|---|
| 3. | ಎನ್.ಹೆಚ್.66<br>ಕೂಳೂರು ಜಂಕ್ಷನ್ | 12.923463<br>74.829449 |  |
| 4. | ಎನ್.ಹೆಚ್.66<br>ಕೂಳೂರು ಜಂಕ್ಷನ್ ನಿಂದ ಕೆ.ಐ.ಸಿ.ಎಲ್ ಜಂಕ್ಷನ್ ರಸ್ತೆ | 12.923402<br>74.829501 |  |
| 5. | ಎನ್.ಹೆಚ್.66<br>ಕೆ.ಐ.ಓ.ಸಿ.ಎಲ್ ಜಂಕ್ಷನ್ ನಿಂದ ಎಂ.ಸಿ.ಎಫ್ ರಸ್ತೆ | 12.928902<br>74.825626 |  |
| 6. | ಎನ್.ಹೆಚ್.66<br>ಕೆ.ಐ.ಓ.ಸಿ.ಎಲ್ ಜಂಕ್ಷನ್ ನಿಂದ ಎಂ.ಸಿ.ಎಫ್ ರಸ್ತೆ ರೈಲ್ವೆ ಗೇಟ್ ಹತ್ತಿರ | 12.928912<br>74.825638 |  |
| 7. | ಎನ್.ಹೆಚ್.66<br>ಕೆ.ಐ.ಓ.ಸಿ.ಎಲ್ ಜಂಕ್ಷನ್ ನಿಂದ ಎಂ.ಸಿ.ಎಫ್ ರಸ್ತೆ | 12.946687<br>74.812106 |  |

Scanned with OKEN Scanne

| | | | |
|---|---|---|---|
| 8. | ಎನ್.ಹೆಚ್.66<br>ಕೆ.ಐ.ಓ.ಸಿ.ಎಲ್ ಜಂಕ್ಷನ್ ನಿಂದ ಎಂ.ಸಿ.ಎಫ್ ರಸ್ತೆ | 12.928902<br>74.825626 |  |
| 9. | ಎನ್.ಹೆಚ್.66<br>ಕೆ.ಐ.ಓ.ಸಿ.ಎಲ್ ಜಂಕ್ಷನ್ ನಿಂದ ಎಂ.ಸಿ.ಎಫ್ ರಸ್ತೆ | 12.928474<br>74.825851 |  |
| 10. | ಎನ್.ಹೆಚ್.66<br>ಕೆ.ಐ.ಓ.ಸಿ.ಎಲ್ ಜಂಕ್ಷನ್ | 12.928362<br>74.825911 |  |
| 11. | ಎನ್.ಹೆಚ್.66<br>ಎಂ.ಸಿಎಫ್/ಎನ್.ಎಂ.ಪಿ.ಎ | 12.928827<br>74.845663 |  |
| 12. | ಎನ್.ಹೆಚ್.66<br>ಜೋಕಟ್ಟೆ ಕ್ರಾಸ್ | 12.951359<br>74.810373 |  |
| 13. | ಎನ್.ಹೆಚ್.66<br>ಬೈಕಂಪಾಡಿ ಜಂಕ್ಷನ್ | 12.951359<br>74.810373 |  |

Scanned with OKEN Scanne

| | | | |
|---|---|---|---|
| 14. | ಎನ್.ಹೆಚ್.66<br>ಹೊನ್ನಕಟ್ಟೆ ಜಂಕ್ಷನ್ | 12.956762<br>74.808293 |  |
| 15. | ಎನ್.ಹೆಚ್.66<br>ಗೋವಿಂದದಾಸ್ ಜಂಕ್ಷನ್ | 12.984936<br>74.801769 |  |
| 16. | ಎನ್.ಹೆಚ್.66<br>ಸುರತ್ಕಲ್ ಜಂಕ್ಷನ್ | 12.984936<br>74.801769 |  |
| 17. | ಎನ್.ಹೆಚ್.66<br>ಸುರತ್ಕಲ್ ಬಸ್ಸ್ ಸ್ಟ್ಯಾಂಡ್ ಹತ್ತಿರ | 12.99008<br>74.800066 |  |
| 18. | ಎನ್.ಹೆಚ್.66<br>ಸುರತ್ಕಲ್ ಸೂರಜ್ ಹೋಟೆಲ್ ಹತ್ತಿರ | 12.99522<br>74.798792 |  |

ತಮ್ಮ ವಿಶ್ವಾಸಿ,

ಉಪ ಪೊಲೀಸ್ ಆಯುಕ್ತರು,
ಅಪರಾಧ & ಸಂಚಾರ,
ಮಂಗಳೂರು ನಗರ, ಮಂಗಳೂರು
17/6/25

ಪ್ರತಿ: 1) ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪವಿಭಾಗ, ಮಂಗಳೂರು ನಗರ
2) ಪೊಲೀಸ್ ನಿರೀಕ್ಷಕರು, ಸಂಚಾರ ಉತ್ತರ ಪೊಲೀಸ್ ಠಾಣೆ, ಮಂಗಳೂರು

17/06/2025
03 Copy Rcvd

Scanned with OKEN Scanne